# ವಚನ ಸಾಹಿತ್ಯ ಮತ್ತು ಸಾಮಾಜಿಕ ಬದಲಾವಣೆ

" ಬದಲಾವಣೆ ಎಂಬುದು ಜಗದ ನಿಯಮ"

ನೆಲನೊಂದೆ ಹೊಲಗೇರಿ ಶಿವಾಲಯಕ್ಕೆ .
ಜಲವೊಂದೆ ಶೌಚ ಆಚಮನಕಕೆ .
ಕುಲವೊಂದೆ ತನ್ನ ತಾನರಿದವನಿಗೆ.
ಫಲವೊಂದೆ ಷಡುದರುಶನ ಮುಕ್ತಿಗೆ.
ನಿಲವೊಂದೆ ಕೂಡಲಸಂಗಮ ದೇವಾ ನಿಮ್ಮನರಿದವನಿಗೆ .
-ಬಸವಣ್ಣ

ರಂಗಸ್ವಾಮಿ. ಹೆಚ್ . ಟಿ
ಸಂಶೋಧನಾ ವಿಧ್ಯಾರ್ಥಿ
ಬೆಂಗಳೂರು ವಿಶ್ವವಿದ್ಯಾನಿಲಯ
ಬೆಂಗಳೂರು

ಕರ್ನಾಟಕ ಇತಿಹಾಸದಲ್ಲಿ ಶಿವಶರಣರ ಚಳುವಳ ಒಂದು ಅಪೂರ್ವ ಘಟನೆ, ವಚನಗಳು ಅನುಭಾವಿಗಳ ಸಾಹಿತ್ಯ ಅನುಭಾವಿಗಳು ತಮ್ಮ ಚಿಂತನೆಯನ್ನು ಹೃದಯದಿಂದ ಹೃದಯಕ್ಕೆ ಮುಟ್ಟುವಂತೆ ಬಿಡಿ ಮಾತುಗಳ ಮೂಲಕ ಹೇಳದ್ದಾರೆ. ವಚನ ಎಂದರೆ ಸಂಸ್ಕ್ರತದಲ್ಲಿ ಮಾತು ಮಾತನಾಡುವುದು, ವ್ಯಕ್ತಪಡಿಸುವುದು ಇತ್ಯಾದಿ ಅರ್ಥಗಳವೆ. ಕನ್ನಡ ಸಾಹಿತ್ಯದ ಕಾವ್ಯ ಪ್ರಕಾರಗಳಲ್ಲಿ ಹಾಡಿದರೆ ಹಾಡಾಗಿ ಹಾಗೆಯೇ ಓದಿದರೆ ಗದ್ಯವಾಗುವ ವಿಭಿನ್ನ ಕಾವ್ಯ ಪ್ರಕಾರಗಳಲ್ಲಿ ಒಂದಾಗಿದೆ. ಮನಷ್ಯರು ತಮ್ಮ ದೈನಂದಿನ ವ್ಯವಹಾರಗಳಲ್ಲಿ ಮಾತನಾಡುವುದು ಗದ್ಯದಲ್ಲಿ ಎಂಬುದು ಸಾಮಾನ್ಯವಾದ ನಂಬಿಕೆ ಆದ್ದರಿಂದಲೇ ಏನೋ ಕನ್ನಡದಲ್ಲಿ 'ವಚನ' ಎನ್ನುವ ಮಾತಿಗೆ ಸಂಸ್ಕ್ರತದ ಮೇಲೆ ಹೇಳದ ಅರ್ಥಗಳ ರೂಢಿಯಾಗಿದೆ. ಕನ್ನಡ ಸಾಹಿತ್ಯದಲ್ಲಿ ಜೊತೆಗೆ ಆದ್ಯಾತ್ಮದಲ್ಲಿ ವಿಭಿನ್ನ ನೆಲೆಗಳಲ್ಲಿ ದಾರಿ ಮಾಡಿಕೊಟ್ಟಂತಹ ಕಾಲಘಟ್ಟವಾಗಿ. ಕಾಯಕ ತತ್ವ ಅನ್ನದಾಸೋಹಗಳ ಪರಿಕಲ್ಪನೆಯಲ್ಲಿ ಜೀವನ ಮತ್ತು ದರ್ಮವನ್ನು ಸಿದ್ಧಗಳಸಿಕೊಂಡು ಕಲ್ಯಾಣ ರಾಜ್ಯದ ಕನಸನ್ನು ನನಸು ಮಾಡಲು ಪಣತೊಟ್ಟ ಸಂದರ್ಭವಾಗಿದೆ . ವಚನ ಸಾಹಿತ್ಯದ ಕಾಲಘಟ್ಟ ಸಂದರ್ಭವನ್ನು ನಾವುಗಳು ಸಾಮಾಜಿಕ, ಆರ್ಥಿಕ ಹಾಗೂ ಸಾಮಾಜಿಕ ಸಾಂಸ್ಕೃತಿಕ ದೃಷ್ಟಿಕೋನದಿಂದ ನೋಡುವುದು ಮುಖ್ಯ. ಆ ಮೂಲಕ ವೈಚಾರಿಕವಾಗಿ , ಸಮಾಜದ ಅವ್ಯವಸ್ಥೆಯ ಚಿತ್ರ ವಚನಕಾರರಲ್ಲಿ ಕಾಣಬಹುದು. ವಚನದ ಗುಣವೆಂದರೆ ಒಂದು-ವೇದನೆ ಮತ್ತೊಂದು ನಿವೇದನೆ ಅನುಭವದಿದಂದಲೇ ಮಾಡಿ ರೂಪಿತವಾದ ಈ ಪ್ರಕಾರವು ಕನ್ನಡ ಹೆಮ್ಮೆಯಾಗಿದ, ವಿಶ್ವ ಸಾಹಿತ್ಯಕ್ಕೆ ಕನ್ನಡವು ಸಲ್ಲಿಸಿರುವ ಕಾಣಿಕೆಯಾಗಿದೆ.

ವಚನ ಸಾಹಿತ್ಯ ಕನ್ನಡ ಸಾಹಿತ್ಯದಲ್ಲಿ ಪ್ರಭಾವಶಾಲೀ ಆತ್ಮ ವಿಮರ್ಶೆಯ ಮಾಧ್ಯಮವಾಗಿ ಸ್ವತಂತ್ರವಾಗಿ ಬೆಳದು ವಿಜ್ರುಂಭಿಸಿ ಮಂದಿನ ಸಾಹಿತ್ಯ ಪರಂಪರೆಗಳ ಮೇಲೆ ಪ್ರಭಾವ ಬೀರಿ ಕನ್ನಡ ಸಾಹಿತ್ಯದಲ್ಲಿ ಮಾತ್ರವಲ್ಲದೆ ವಿಶ್ವ ಸಾಹಿತ್ಯದಲ್ಲಿ ಒಂದು ಭಾಗವಾಗಿ ನೋಡಬಹುದು. ಜೇಡರ ದಾಸಿಮಯ್ಯ, ಮಾದರ ಚನ್ನಯ್ಯ ,ಡೊಹರ ಕಕ್ಕಯ್ಯ, ಆಯ್ದಕ್ಕಿ ಮಾರಯ್ಯ , ಬಸವಣ್ಣ , ಅಂಬಿಗರ ಚೌಡಯ್ಯ , ಸೂಳೆ ಸಂಕವ್ವೆ , ಅಕ್ಕಮಹಾದೇವಿ , ಅಲ್ಲಮ ಪ್ರಭು , ದೇವರ ದಾಸಿಮಯ್ಯ ಮುಂತಾದ ವಚನಕಾರರು ತಮ್ಮ ಅಭಿವ್ಯಕ್ತಿಗೆ ವಚನವನ್ನು ಮುಖ್ಯ ಸ್ವಾತಂತ್ರ್ಯ ಮಾಧ್ಯಮವಾಗಿ ಮಾಡಿಕೊಂಡು, ಸಮಾಜದಲ್ಲಿನ ಜಾತಿ ತೊಳೆಯಬೇಕು ಜೊತೆಗೆ ಸಾಮಾಜಿಕ ಮೌಲ್ಯದ ಪ್ರತಿಪಾದನೆ ಸಾರಿದ್ದಾರೆ. ಚಳುವಳಯ ಮೂಲಕ ಸಾಮಾಜಿಕ ವ್ಯಾಪಕತೆ ಅಪಾರವಾದುದೆಂದು ಗಣನೆಗೆ ಬರುವಂತೆ ತಿಳಸಿದ್ದಾರೆ. ಶರಣಯುಗದಲ್ಲಿ ನಡೆದ ಆ ವೈಶಿಷ್ಟ ಪೂರ್ಣವಾದ ಚಳುವಳ ಚರಿತ್ರೆಯಲ್ಲಿ ವಿಶಿಷ್ಟವಾಗಿ ದಾಖಲಾಗಿದೆ.

ಇವರುಗಳ ವಚನಗಳಲ್ಲಿ ಹುದುಗಿರುವಂತಹ " ಸಾಮಾಜಿಕ ಬದಲಾವಣೆಯ ಮೌಲ್ಯಗಳು" ಗಮನಾರ್ಹವಾದವು ಇವರುಗಳ ಸಾಮಾಜಿಕ ಚಿಂತನೆಗಳು ಅನುಸರಣ ಸಾಧ್ಯವೋ, ಅನುಭವ ವೇದ್ಯವೂ ಸಾರ್ವಕಾಲಿಕವೂ ಆಗಿರುವುದರಿಂದ ಅವುಗಳಿಗೆ ಕ್ರಿಯಾತ್ಮಕ ನೆಲೆ ಪ್ರಾಪ್ತವಾಗಿದೆ. ಇದರಂತೆ ವಚನಗಳ ಓದುವ ,ತಿಳಯುವ, ಗ್ರಹಿಸುವ, ಚಿಂತಿಸುವ, ಪ್ರಸ್ತುತತೆಯ ಅಗತ್ಯವೂ ಇದೆ. ಬಹುಷಹ ಸಕಲ ಜೀವಿಗಳಗೂ ಒಳ್ಳೆಯದನ್ನು ಬಯಸುವ ಘನವಾದ ಉದ್ದೇಶವನ್ನಿಟ್ಟುಕೊಂಡು ಶ್ರೀ ಸಾಮಾನ್ಯರ ನಾಡಿ-ಮಿಡಿತಕ್ಕೆ ಸಹಜವಾಗಿ ಬಹಳ ಹತ್ತಿರದಿಂದ ಸ್ಪಂದಿಸುತ್ತ ಬಂದಿರುವ ಅಪೂರ್ವ ಸೃಷ್ಟಿ ವಚನಗಳಾಗಿ ಸಾಹಿತ್ಯದ ದೃಷ್ಟಿಯಿಂದ ವಚನಕಾರರಿಗಿಂತ ವಚನಗಳು ಮುಖ್ಯವಾಗುತ್ತವೆ. ಆದರೆ ಸಾಮಾಜಿಕ ಕ್ರಾಂತಿಯ ಸೃಷ್ಟಿಯಿಂದ ವಚನಕಾರರು ಮುಖ್ಯವಾಗುತ್ತಾರೆ. ವಚನಗಳು ಸಾಮಾಜಿಕ-ಧಾರ್ಮಿಕ ಕ್ಷೇತ್ರದಲ್ಲಿ ವಚನಕಾರರು ಕ್ರಾಂತಿಯನ್ನು ಮಾಡಲು ಉಪಯೋಗಿಸಿದ ಸಾಧನಗಳಾಗಿದೆ. ಸಾಹಿತ್ಯ ಎನ್ನುವುದು ವ್ಯಕ್ತಿಯ ಮಾನಸಿಕ ಒತ್ತಡದ ಫಲವಾಗಿ ಮಾಡುವಂತಹದು ವಚನಗಳಲ್ಲಿಯೂ ಅನೇಕವು ಅಂತಹ ತುಡಿತದಿಂದ ಬಂದುದಾಗಿದ್ದು ಅತ್ಯು ತ್ರಮ ಸಾಹಿತ್ಯದ ಮೆರುಗನ್ನು ಪಡೆದುಕೊಳ್ಳುವ ಮೂಲಕ ಅಂದಿನ ಜಡತ್ವದ ಸಮಾಜದಲ್ಲಿ ಚಲನೆ ಉಂಟು ಮಾಡಿ ಸಮಾಜವನ್ನು ಪರಂಪರೆಯ ಕೈ ಮುಷ್ಟಿಯಿಂದ ಬಿಡುಗಡೆ ಮಾಡಿದಂತೆ ಕನ್ನಡ ಸಾಹಿತ್ಯವನ್ನು ಇನ್ನೊಂದು ಬಗೆಯ ಹಿಡಿತದಿಂದ ತಪ್ಪಿಸಿದವರು ವಚನಕಾರರು.

ಇವನಾರವ ಇವನಾರವ ಇವನಾರವನೆಂದೆನಿಸದಿರಯ್ಯಾ
ಇವನಮ್ಮವ ಇವನಮ್ಮವ ಇವನಮ್ಮವನೆಂದೆನಿಸಯ್ಯಾ
ಕೂಡಲಸಂಗಮದೇವಾ



Scanned with CamScanner

ನಿಮ್ಮ ಮನೆಯ ಮಗನೆಂದೆನಿಸಯ್ಯಾ

ಸಾರ್ವಕಾಲಿಕ ಜೀವನ ಮೌಲ್ಯಗಳನ್ನು ಅಳವಡಿಸಿಕೊಂಡು ಜನ ಬದುಕಬೇಕೆಂಬ ಘನವಾದ ಉದ್ದೇಶವನ್ನು ಆದರ್ಶವಾಗಿಟ್ಟುಕೊಂಡಿರುವ ವಚನಗಳು ಸಾಮಾಜಿಕ ಅಸಮಾನತೆ, ಬಡತನ, ನಿರುದ್ಯೋಗ, ಅನಕ್ಷರತೆ, ಶೋಷಣೆ,ದ್ವೇಷ,ಅಜ್ಞಾನ,ಮೂಢನಂಬಿಕೆಗಳಂತಹ ಸಾಮಾಜಿಕ ರೋಗಗಳಿಗೆ ವಿಡಂಬನೆ ಮಾಡುವಲ್ಲಿ ಸಂಶಯವಿಲ್ಲ. " ಕಾಯಕವೇ ಕೈಲಾಸಂ" ಅಂದರೆ ಕಾಯಕ ಮಾಡಲು ಕಾಯಕವೇ ಮುಖ್ಯವೇ ಅಲ್ಲವೇ ? ಅಂದರೆ ಕಾಯ-ಶರೀರ ನಶ್ವರ ಎಂದು ತಿರಸ್ಕಾರ ಮಾಡಿದರೆ ಅದು ದುರ್ಬಲವಾದರೆ ಕಾಯಕ ಮಾಡುವುದಾದರು ಹೇಗೆ ? ಸಾದ್ಯ? ಆದ್ದರಿಂದ ಸಕಾರಾತ್ಮಕವಾಗಿ ಸಾಕಾರ ಮೂರ್ತಿಗಳಾದ ನಮ್ಮ ಶರಣರು ಈ ಶರೀರವನ್ನು ದೇವನೊಲಿಸಲು ಬಂದ ಪ್ರಸಾದಕಾಯ ಎಂದರು ವಚನಕಾರರು.

ಕೊಲುವನೇ ಮಾದಿಗ, ಹೊಲಸು ತಿಂಬುವನೇ ಹೊಲೆಯ

ಕುಲವೇನೊ ಅವರಿಂದ ಕುಲವೇನೊ ?

ಸಕಲ ಜೀವಾತ್ಮರಿಗೆ ಲೇಸನೆ ಬಯಸುವ

ನಮ್ಮ ಕೂಡಲ ಸಂಗಮನ ಶರಣರೆ ಕುಲಜರು

ನಾವುಗಳು ಮೇಲು ಕೀಳುಗಳನ್ನು ಜಾತಿಯಿಂದ ಅಳೆಯಬಾರದು ಯಾರು ಪ್ರಾಣಿಗಳನ್ನು ಕೊಲ್ಲುತ್ತರೋ ಬಾಯಿಚ್ಚೆಗಾಗಿ ಹೊಲಸನ್ನು ತಿನ್ನತ್ತಾರೋ ಅವರೇ ಕೀಳು ಶ್ರೇಷ್ಠ ಕುಲದವರೆಂದು ಯಾರನ್ನು ತಿಳಯುವುದು ? ಸಕಲ ಜೀವಾತ್ಮರಿಗೆ ಲೇಸನ್ನು ಅಂದರೆ ಒಳೆಯದನ್ನು ಬಯಸುವವರೇ ನಿಜವಾದ ಕುಲಜರು ಕೂಡಲ ಸಂಗಮ ಶರಣರೇ ಕುಲಜರು ಈ ಮಾತು ಸಹ ಸಾರ್ವಕಾಲಿಕವಾದ್ದು ಉತ್ತಮವಾದ ಜೀವನಕ್ಕೆ ಕಾರಣವಾಗುವ ನೈತಿಕ ಮೌಲ್ಯಗಳನ್ನು ಸಾಮಾಜಿಕ ಮೌಲ್ಯಗಳನ್ನು ಅಳವಡಿಸಿಕೊಳ್ಳುವುದು ಉತ್ತಮ .

ಸೆಟ್ಟಿಯೆಂಬೆನೆ ಸಿರಿಯಾಳನ .

ಮಾದರನೆಂಬೆನೆ ಚೆನ್ನಯ್ಯನ .

ಡೋಹರನೆಂಬೆನೆ ಕಕ್ಕಯ್ಯನ .

ಆನು ಹಾರುವನೆಂದರೆ ಕೂಡಲ ಸಂಗಯ್ಯ ನಗುವನಯ್ಯಾ .

ಮಾಡುವ ಕೆಲಸದಿಂದ ಸಮಾಜದಲ್ಲಿ ಗುರುತಿಸಿಕೊಂಡಿದ್ದಾರೆ ಎಂದು ಹೇಳುವುದು ಈವಚನದ ಉದ್ದೇಶ . ಹೀಗೆ ಹೇಳುವ ಮೂಲಕ , ಕಾಯಕಕ್ಕೆ ಅಂಟಿದ್ದ ಜಾತಿಯ ಮೇಲು ಕೀಲು ಎಂಬ ಅಸಮಾನತೆಯನ್ನು ಸಮಾಜದಿಂದ ಕಿತ್ತು ಹಾಕಿದರು ಜೊತೆಗೆ ಜಾತ್ಯತೀತ ಸಮಾಜದ ಕನಸು ಕಂಡವರು ವಚನಕಾರರು.

ಒಟ್ಟಾರೆಯಾಗಿ ವಚನಗಳು ಕನ್ನಡಕ್ಕೆ ಬಾಷೆಗೆ ಮತ್ತು ಸಾಹಿತ್ಯಕ್ಕೆ ಅನುಭವದ ಹೊಸ ಮೆರಗು ನೀಡುವುದರ ಜೊತೆಗೆ ಅಭಿವ್ಯಕ್ತಿಗೆ ಹಾಗೂ ಜನರ ಭಾಷೆಯು ಎಷ್ಟು ಪರಿಣಾಮಕಾರಿ ಮಾಧ್ಯಮವೆಂಬುದನ್ನು ತೋರಿಸಿಕೊಳ್ಳುವ, ಜೊತೆಗೆ ವಚನ ಸಾಹಿತ್ಯ ಅಪಾರ ಪ್ರಮಾಣದ ವಚನಗಳ ಅನುಭವಿ ಸಾಹಿತ್ಯವನ್ನು ಅವಲೋಕಿಸಿದಾಗ ಸಾಮಾಜಿಕ ಬದಲಾವಣೆ ತಂಪಾದ ಗಾಳಯನ್ನು ಅರಿಯಬಹುದು. ಆದರೆ ಪ್ರಸ್ತುತ ದಿನಗಳಲ್ಲಿ ನೈತಿಕ ಸಾಮಾಜಿಕ ಮೌಲ್ಯಗಳು ಕುಸಿಯುತ್ತಿವೆ ಬದುಕಿನ ಚಿಂತನೆಗಳ ಮೌಲ್ಯಗಳು ಕುಸಿಯುತಿರುವ ಕಾಲಘಟ್ಟದಲ್ಲಿ ಜಾಗೃತಗೊಳಸುವ ಕಾರ್ಯ ವಚನಗಳ ಹಿನ್ನೆಲೆಯಿಂದ ನಡೆಯುತ್ತಿರುವುದು ಇಂದಿನ ಯುವ ಜನತೆಗೆ ಪೂರಕವಾಗಿದೆ.

ಆಕರ ಗ್ರಂಥ


೧) ಡಾ. ಪಿ.ವಿ ನಾರಾಯಣ ; ವಚನ ಸಾಹಿತ್ಯ ಒಂದು ಪರಿಚಯ
ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು.
ಮೈಸೂರು

೨) ಬಸವ ಸಮಿತಿ ; ಬಸವ ಪಂಥ, ಆಗಸ್ಟ್ ೨೦೧೯ ಸಂಚಿಕೆ ೪೭೭ ಬಸವೇಶ್ವರ
ರಸ್ತೆ ,ಬೆಂಗಳೂರು.

೩) ಪ್ರೊ.ಜಿ.ಎಸ್. ಸಿದ್ದಲಿಂಗಯ್ಯ ; ವಚನ ವಾಙ್ಮಯ ಮತ್ತು ಭಾಷೆ
೨೦೧೩ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು
ಮೈಸೂರು

೪) ಎಂ.ಎಂ ಕಲಬುರ್ಗಿ; ಬಸವ ಸಮಿತಿ
೨೦೧೨ ಬಸವ ಭವನ ,ಬಸವೇಶ್ವರವೃತ
ಬೆಂಗಳೂರು-೦೧




Scanned with CamScanner